ವಿಜಯ ಕರ್ನಾಟಕ

# ರಕ್ತದಾನ ಮಾಡಿ ಜೀವ ಉಳಿಸಿ

**ಹಾರೋಹಳ್ಳಿ (ಕನಕಪುರ):** ಶ್ರೇಷ್ಠ ದಾನಗಳಲ್ಲಿ ರಕ್ತದಾನವು ಸಹ ಒಂದಾಗಿದ್ದು, ರಕ್ತದಾನದ ಮೂಲಕ ಇನ್ನೊಂದು ಜೀವಕ್ಕೆ ನೆರವಾಗಬೇಕು ಎಂದು ಡಾ.ಜಯಶ್ರೀ ಹೇಳಿದರು.

ತಾಲೂಕಿನ ಜಕ್ಕಸಂದ್ರ ಸಮೀಪದ ಜೈನ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬೆಂಗಳೂರಿನ ಕಿದ್ವಾಯಿ, ನಿಮ್ಹಾನ್ಸ್, ಇಂದಿರಾಗಾಂಧಿ ಇನ್‌ಸ್ಟಿಟ್ಯೂಟ್ ಮತ್ತು ಲಯನ್ಸ್ ಸಂಸ್ಥೆಯ ಸಹಭಾಗಿತ್ವದಲ್ಲಿ ಹಮ್ಮಿಕೊಂಡಿದ್ದ 11ನೇ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿ, ಅಪಘಾತಗಳಲ್ಲಿ ಮತ್ತು ತುರ್ತು ಸಮಯಗಳಲ್ಲಿ ಕೆಲವು ರೋಗಿಗಳಿಗೆ ರಕ್ತದ ಅಗತ್ಯವಿರುತ್ತದೆ. ಇಂತಹ ಶಿಬಿರಗಳಲ್ಲಿ ಪಡೆಯುವ ರಕ್ತವನ್ನು ತುರ್ತು ಸಮಯಗಳಲ್ಲಿ ಉಪಯೋಗಿಸಿಕೊಳ್ಳುವ ಮೂಲಕ ಮತ್ತೊಂದು ಜೀವಕ್ಕೆ ಇಂತಹ ರಕ್ತ ಅಮೂಲ್ಯವಾಗಿರುತ್ತದೆ. ಆದ್ದರಿಂದ ಆರೋಗ್ಯವಂತ ಪ್ರತಿಯೊಬ್ಬ ವ್ಯಕ್ತಿಯೂ ರಕ್ತದಾನ ಶಿಬಿರಗಳಲ್ಲಿ ಪಾಲ್ಗೊಂಡು ರಕ್ತದಾನ ಮಾಡಬೇಕೆಂದು ಕರೆ ನೀಡಿದರು.

ಕಾಲೇಜು ನಿರ್ದೇಶಕ ಪ್ರೊ.ಹರಿಪ್ರಸಾದ್ ಮಾತನಾಡಿ, ಇಂದಿನ ಯುವಪೀಳಿಗೆ ಸಮಯದ ಒತ್ತಡದಿಂದ ತಮ್ಮ ಆಹಾರ ಮತ್ತು ಆರೋಗ್ಯದ ಕಡೆ ಹೆಚ್ಚಿನ ಗಮನ ಹರಿಸಲು ಸಾಧ್ಯವಾಗುತ್ತಿಲ್ಲ. ಪ್ರತಿನಿತ್ಯ ಪೌಷ್ಠಿಕಾಂಶದ ಆಹಾರಗಳನ್ನು ಸೇವಿಸಿ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಯುವಕರಲ್ಲಿ ಶಕ್ತಿ ಮತ್ತು ಚೈತನ್ಯ ಇಮ್ಮಡಿಯಾಗಿರುತ್ತದೆ. ಇಂತಹ ಸಮಯದಲ್ಲಿ ರಕ್ತದಾನಗಳಲ್ಲಿ ಭಾಗವಹಿಸುವ ಮೂಲಕ ತಮ್ಮ ಆರೋಗ್ಯವಂತ ರಕ್ತವನ್ನು ತುರ್ತು ಸಮಯದಲ್ಲಿರುವ ವ್ಯಕ್ತಿಗಳಿಗೆ ನೀಡಿ ಮಾನವೀಯತೆ ತೋರಬೇಕು ಎಂದರು.

ಶಿಬಿರದಲ್ಲಿ ಸುಮಾರು 800 ವಿದ್ಯಾರ್ಥಿಗಳು, ಶಿಕ್ಷಕರು, ಬೋಧಕೇತರ ವರ್ಗದವರು ಪಾಲ್ಗೊಂಡು ರಕ್ತದಾನ ಮಾಡಿ ಸುಮಾರು 447 ಯೂನಿಟ್ ರಕ್ತವನ್ನು ಸಂಗ್ರಹಿಸಯಿತು. ಕಾರ್ಯಕ್ರಮದಲ್ಲಿ ಸಹ ನಿರ್ದೇಶಕರಾದ ಪ್ರೊ. ಮುರಳೀಧರ್, ಉಪನ್ಯಾಸಕರಾದ ಅರ್ಚನಾ, ಯೋಗೀಶ್‌ಕುಮಾರ್ ಮತ್ತು ಕಾಲೇಜು ಆಡಳಿತ ಮಂಡಳಿಯ ಶೈನ್‌ಗೋಪಾಲ್, ಸಿಬ್ಬಂದಿಗಳು ಸೇರಿದಂತೆ ನಿಮ್ಹಾನ್ಸ್ ಆಸ್ಪತ್ರೆಯ ಡಾ.ದೀಪ, ಲಯನ್ಸ್ ಸಂಸ್ಥೆಯ ಡಾ.ವಿಜಯ್ ಮತ್ತು ಇಂದಿರಾಗಾಂಧಿ ಇನ್‌ಸ್ಟಿಟ್ಯೂಟ್‌ನ ಸಿಬ್ಬಂದಿಗಳು ಹಾಜರಿದ್ದರು.



ಕನಕಪುರ ತಾಲೂಕು ಜಕ್ಕಸಂದ್ರ ಬಳಿಯ ಜೈನ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ ಡಾ.ಜಯಶ್ರೀ, ಡಾ.ದೀಪ, ಡಾ.ವಿಜಯ್, ಪ್ರೊ.ಹರಿಪ್ರಸಾದ್ ಇನ್ನಿತರರಿದ್ದರು.